

ಅನ್ನೂ ಸೇರಿಸಲು ಪ್ರಬಲ ಯತ್ನಗಳು ನಡೆಯುತ್ತಿವೆ. ವಿಶ್ವಮಟ್ಟದಲ್ಲಿ ಅಧಿಕೃತತೆಯ ಮುದ್ರೆ ಒತ್ತಿದರೆ ಇದರಿಂದ ಇನ್ನಷ್ಟು ಹಣ ದೋಚಬಹುದು ಎನ್ನುವ ದೊಡ್ಡ ಲೆಕ್ಕಾಚಾರವಿದು. ವಿಡಿಯೊ ಗೇಮ್‌ನಲ್ಲಿ ಕೆಟ್ಟ ಅನಾಮಧೇಯತೆ ಇದೆ. ಸಾಫ್ಟ್‌ವೇರ್ ತರಬೇತಿ ಪಡೆಯುತ್ತಿರುವವರಲ್ಲಿ ಸಿಂಹಪಾಲು ಜನರಿಗೆ ಗೇಮಿಂಗ್ ಪ್ರೋಗ್ರಾಂ ಮಾಡುವುದನ್ನು ಕಲಿಸಿಕೊಡುತ್ತಿದ್ದಾರೆ. ಹದಿಹರೆಯದ ಮಕ್ಕಳ ಡಿಎನ್‌ಎಯಲ್ಲೇ ಮೊಬೈಲ್ ತಂತ್ರಜ್ಞಾನ ಬೆರೆತಿರುವುದರಿಂದ ಅವರನ್ನು ಅದರಿಂದ ವಿಮುಖರನ್ನಾಗಿಸುವುದು ಕಷ್ಟ ಎನ್ನುವುದು ನಿಜ. ಆದರೆ ಅರವತ್ತು ಎಪ್ಪತ್ತು ವರ್ಷ ವಯಸ್ಸಾದವರೂ ಟಿ.ವಿ. ಎದುರು ಕುಳಿತು, ಓತಪ್ರೋತವಾಗಿ ಬರುವ ಧಾರಾವಾಹಿಗಳನ್ನೂ ನೋಡುತ್ತಾ ಜತೆಗೇ ಮೊಬೈಲ್‌ನಲ್ಲಿ ಆಟ ಆಡುತ್ತಿರುವುದನ್ನು ಗಮನಿಸಿದ್ದೇನೆ. ಗಾಂಜಾ, ಹೆಂಡ ಬಿಡಬಹುದು. ಮೊಬೈಲ್ ವ್ಯಸನ ಬಿಡುವುದು ಕಷ್ಟ.

ವಿಡಿಯೊ ಗೇಮ್ ಆಡುವವರಿಗೆ 10–12 ಗಂಟೆ ಅಭ್ಯಾಸ ಮಾಡಿಸುತ್ತಾರೆ. ಅವರ ಪರಿಣತಿ ಅಳೆಯಲೆಂದೇ ಡೇಟಾ ಆಧಾರಿತ ವೆಬ್‌ಸೈಟ್‌ಗಳು ಕಾರ್ಯನಿರ್ವಹಿಸುತ್ತಿವೆ. ವಿಶ್ವದಲ್ಲೇ ಅತಿ ಹೆಚ್ಚು ಅಂತರ್ಜಾಲ ಬಳಕೆದಾರರ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. 280ಕ್ಕೂ ಹೆಚ್ಚು ವಿಡಿಯೊ ಗೇಮ್ ಕಂಪನಿಗಳು ನಮ್ಮಲ್ಲಿವೆ. ಹತ್ತು ವರ್ಷಗಳ ಹಿಂದೆ ಬರೀ ಹದಿನಾರು ಹದಿನೇಳು ಕಂಪನಿಗಳಿದ್ದವು. ಶೇ. 47ರಷ್ಟು ಸ್ಮಾರ್ಟ್‌ಫೋನ್ ಬಳಕೆದಾರರು ನಮ್ಮ ದೇಶದಲ್ಲಿದ್ದಾರೆ. ಕೆಲವು ಮೊಬೈಲ್ ಕಂಪನಿಗಳು ಹ್ಯಾಂಡ್‌ಸೆಟ್‌ಗೆ ಹೊಂದುವ ಉಗುರಿನ ಬಣ್ಣಗಳನ್ನು ಸೂಚಿಸುವ ಕೃತಕ ಬುದ್ಧಿಮತ್ತೆಯನ್ನು ಹೊಂದಿವೆ. ಡೇಟಾ ಗಣಿಗಾರಿಕೆ ಯಾವ ಮಟ್ಟದಲ್ಲಿ ಇದೆ ಎನ್ನುವುದಕ್ಕೆ ಇವೆಲ್ಲ ಸಾಕ್ಷಿಗಳು.

ಇನ್ನೊಂದು ಕಡೆ, ಇವೆಲ್ಲಕ್ಕೂ ಪೂರಕವಾಗಿ ಜಾಹೀರಾತು ಮಾರುಕಟ್ಟೆ ಸುಳ್ಳಿನ ಲೋಕವನ್ನೇ ತೆರೆದಿಟ್ಟಿದೆ. 22 ಬಗೆಯ ಸುಗಂಧದ್ರವ್ಯ ಹೊತ್ತ ಕಾಂಡೋಮ್‌ಗಳು ಈಗ ಮಾರುಕಟ್ಟೆಯಲ್ಲಿ ಸಿಗುತ್ತವೆ. ‘ಯಾರು ನಿನಗೆ ಮಾದರಿ?’ ಎಂದು ನಾನು ಕೇಳಿದ ಪ್ರಶ್ನೆಗೆ, ‘ಅಂಬಾನಿಯೇ ನನಗೆ ಮಾದರಿ ವ್ಯಕ್ತಿ’ ಎಂದು ಇಪ್ಪತ್ತು ವರ್ಷದ ಹುಡುಗನೊಬ್ಬ ಉತ್ತರಿಸಿದ. ‘ಅಂಬಾನಿಯ ಕಂಪನಿಯೊಂದು ಎಷ್ಟು ಪೆಟ್ರೋ ಕೆಮಿಕಲ್ ಬೂದಿಯನ್ನು ಭೂಮಿ ಮೇಲೆ ಉದುರಿಸುತ್ತಿದೆ ಎಂಬ ಅರಿವಿದೆಯೇ?’ ಎಂಬ ನನ್ನ ಇನ್ನೊಂದು ಪ್ರಶ್ನೆ ಅವನನ್ನು ಚಕಿತಗೊಳಿಸಿತು. ನಾನು ಯಾರನ್ನೂ ಇದಮಿತ್ಥಂ ಎಂದು ತೀರ್ಮಾನಿಸುವುದಿಲ್ಲ. ಆದರೂ ಹುಡುಗರ ತಲೆಯಲ್ಲಿ ಇಂತಹ ವ್ಯಕ್ತಿಗಳು ಮಾದರಿ ಎಂದು ಪ್ರತಿಷ್ಠಾಪಿತವಾಗಿರುವುದಕ್ಕೆ ಕಾರಣ ಮೊಬೈಲ್ ಅಲ್ಲದೆ ಮತ್ತೇನೂ ಅಲ್ಲ ಎನ್ನುವುದಂತೂ ಸ್ಪಷ್ಟ.



**ವಿಡಿಯೊ ಗೇಮ್‌ನಲ್ಲಿ ಕೆಟ್ಟ ಅನಾಮಧೇಯತೆ ಇದೆ. ಸಾಫ್ಟ್‌ವೇರ್ ತರಬೇತಿ ಪಡೆಯುತ್ತಿರುವವರಲ್ಲಿ ಸಿಂಹಪಾಲು ಜನರಿಗೆ ಗೇಮಿಂಗ್ ಪ್ರೋಗ್ರಾಂ ಮಾಡುವುದನ್ನು ಕಲಿಸಿಕೊಡುತ್ತಿದ್ದಾರೆ. ಹದಿಹರೆಯದ ಮಕ್ಕಳ ಡಿಎನ್‌ಎಯಲ್ಲೇ ಮೊಬೈಲ್ ತಂತ್ರಜ್ಞಾನ ಬೆರೆತಿರುವುದರಿಂದ ಅವರನ್ನು ಅದರಿಂದ ವಿಮುಖರನ್ನಾಗಿಸುವುದು ಕಷ್ಟ ಎನ್ನುವುದು ನಿಜ. ಆದರೆ ಅರವತ್ತು ಎಪ್ಪತ್ತು ವರ್ಷ ವಯಸ್ಸಾದವರೂ ಟಿ.ವಿ. ಎದುರು ಕುಳಿತು, ಓತಪ್ರೋತವಾಗಿ ಬರುವ ಧಾರಾವಾಹಿಗಳನ್ನೂ ನೋಡುತ್ತಾ ಜತೆಗೇ ಮೊಬೈಲ್‌ನಲ್ಲಿ ಆಟ ಆಡುತ್ತಿರುವುದನ್ನು ಗಮನಿಸಿದ್ದೇನೆ. ಗಾಂಜಾ, ಹೆಂಡ ಬಿಡಬಹುದು. ಮೊಬೈಲ್ ವ್ಯಸನ ಬಿಡುವುದು ಕಷ್ಟ.**